

4
ಮತ್ತದೇ ದಾಸವಾಳದ ಆಳಬೇರಿನ
ಮೂಲದಿಂದೊಂದು ಗೆಣ್ಣು ಕೊನರುತ್ತಿದೆ
ಅದರ ಹೊಕ್ಕುಳ ಬಳ್ಳಿಯಲ್ಲೊಂದು ಮೊಗ್ಗು
ಈಗಷ್ಟೇ ದಳತೆರೆದು ಅರಳುತ್ತಾ
ಬ್ರಹ್ಮಾಂಡ ಭಾಷ್ಯವ ಬರೆಯುತ್ತಿದೆ
ಮಣ್ಣ ತಬ್ಬಿರುವ ಮಬ್ಬು ಸರಿದೀತು ದೂರ
ಕಣ್ಣ ಕವಿದಿರುವ ಮಬ್ಬು ಸರಿಯಲಾರದೆ ದೂರ
ಬೆಳಕು ಕಂಡೀತು ಹೇಗೆ?



5
ಕಾಣ್ಕೆ ಕಣ್ಕಟ್ಟುಗಳ ಕಣ್ಣಪಟ್ಟಿಯ ಕಳಚಿ
ದಾಸವಾಳದ ಬೇರು ಹೊಕ್ಕಳುಗಳ ಬಗೆಯದೆ
ಲೋಕ ಬರಿದೇ ಕವಿ–ಕವಿತೆಗಳು ಬಗೆವ
ವಿಸ್ಮಯವನೇ ಕಂಡು ಮೂಕವಿಸ್ಮಿತಗೊಂಡ ಪರಿಗೆ
ದಾಸವಾಳವು ನಾಚಿ ಕೆಂಪಾಗಿದೆ

ವಿಷ್ಣುನಾಭಿ ಸಂಜಾತ ಬ್ರಹ್ಮಕಮಲದ ಮುಖ
ಕೆಂಪಾದ ದಿನ, ಶಂಖ, ಚಕ್ರ ಗದೆಗಳೆಲ್ಲಾ ಭೂಮಿಗಿಳಿದು
ರಾಮ ರಹೀಮರ ಗುತ್ತಿಗೆದಾರರ ಕೈಯ ಕೈದುಗಳಾಗಿ
ಬಡಬಗ್ಗರ ರುಂಡ ಚೆಂಡಾಡಿ ಭೂಮಿಯೇ ಕೆಂಪಾದ ದಿನ
ದೆಹಲಿಯ ಕೆಂಪುಕೋಟೆ, ಕರುನಾಡ ಹೈಕೋರ್ಟುಗಳು
ಕೆಂಪಾದ ದಿನ, ಕಂಬಾಲಪಲ್ಲಿ, ಕೈರ್ಲಾಂಜಿಯ
ದಲಿತರ ನೆತ್ತರು ಭೂಮಿಗೆ ಬಿದ್ದು ಕೆಂಪಾದ ದಿನ,



ಗೋಡ್ಸೆಯ ಗುಂಡೇಟಿಗೆ ಗಾಂಧಿಯ ಎದೆ ಬಿರಿದು
ಕೆಂಪಾದ ದಿನ, ಕಲಬುರ್ಗಿ–ಗೌರಿಯರ ಎದೆಬಗೆದ
ನೆತ್ತರು ಕುಡಿದು ಕೆಂಪಾದ ದಾಸವಾಳದ ಗಿಡಕೆ
ಶ್ವೇತಭವನದ ಮೇಲೆ ಹಾರಿಬಿಟ್ಟ
ಶ್ವೇತವರ್ಣದ ಪಾರಿವಾಳವು ಬಂದು
ಗೂಡು ಕಟ್ಟಲು ತಾವು ಹುಡುಕುವುದೆಂದು
ಬ್ರಹ್ಮಾಂಡ ಗುರುಗಳು ಬೆಳ್ಳಂಬೆಳಿಗ್ಗೆ
ಆತ್ಮದರ್ಶನ ವಾಹಿನಿಯಲ್ಲಿ ಉವಾಚಿಸಿರುವಲ್ಲಿಗೆ
'ದೇಶಕೋಶ ದಾಸವಾಳ' ಪುರಾಣವು ಸಮಾಪ್ತಿಯಾದುದು.

